ಅ) ಕಾವೇರಿ ಕುಡಿಯುವ ನೀರಿನ 3ನೇ ಹಂತದ ಕಾರ್ಯ ಯಾವಾಗ ಪ್ರಾರಂಭಿಸಲಾಯಿತು?

ಆ) ಅದರ ಅಂದಾಜು ವೆಚ್ಚ ಎಷ್ಟು ಹಾಗೂ ಇದುವರೆಗೆ ಗುತ್ತಿಗೆದಾರರಿಗೆ ನೀಡಿರುವ ಹಣ ಎಷ್ಟು?

ಇ) ಈಗ ಈ ಕಾರ್ಯ ಯಾವ ಹಂತದಲ್ಲಿದೆ?

ಈ) ಗುತ್ತಿಗೆದಾರರು ಮಾಡಿಸುತ್ತಿರುವ ಕೆಲಸದ ಗುಣಮಟ್ಟ ಏನೆಂಬುದನ್ನು ತಜ್ಞ ಇಂಜಿನಿಯರ್‌ಗಳಿಂದ ಪರಿಶೀಲಿಸಲು ಸರ್ಕಾರ ಏನಾದರೂ ವ್ಯವಸ್ಥೆ ಮಾಡಿದೆಯೇ?

ಉ) 3ನೇ ಹಂತದ ಈ ಕಾರ್ಯವು ನಿಗದಿತ ವೇಳೆಯಲ್ಲಿ ಪೂರ್ಣಗೊಳ್ಳುವುದೇ?

ಊ) ಇಷ್ಟು ತಡವಾಗುವುದಕ್ಕೆ ಆದಂಥ ಅಡಚಣೆ ಏನು?

ಶ್ರೀ ಕೆ.ಜಿ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು)

ಅ) ಕಾವೇರಿ 3ನೇ ಹಂತದ ಯೋಜನೆಯ ಪ್ರಾಥಮಿಕ ಹಂತದ ಕೆಲಸಗಳನ್ನು 1985-86ರಲ್ಲಿ ಪ್ರಾರಂಭಿಸಿ ಬೃಹತ್ ಕಾಮಗಾರಿಗಳನ್ನು 1988-89ರಲ್ಲಿ ಪ್ರಾರಂಭಿಸಲಾಯಿತು.

ಆ) ಕಾವೇರಿ 3ನೇ ಹಂತದ ಅಂದಾಜು ವೆಚ್ಚ ರೂ. 240.00 ಕೋಟಿಗಳು. ಇದುವರೆಗೆ ಕೆಲಸಗಳ ಕಾಮಗಾರಿಗಳಿಗೆ ರೂ. 157.50 ಕೋಟಿ ರೂಪಾಯಿಗಳು ವೆಚ್ಚವಾಗಿದೆ.

ಇ) ಕಾವೇರಿ 3ನೇ ಹಂತದ ಕೆಲಸಗಳು ಶೇಕಡ 65 ರಷ್ಟು ಮುಗಿದಿದೆ.

ಈ) ಮಂಡಲಿಯು ಮಾಡಿಸುತ್ತಿರುವ ಕೆಲಸಗಳ ಗುಣಮಟ್ಟವನ್ನು ಪರಿಶೀಲಿಸಲು ಮಂಡಲಿಯ ಅಧೀಕ್ಷಕ ಅಭಿಯಂತರರ ನೇತೃತ್ವದಲ್ಲಿ ಜಾಗೃತ ಹಾಗೂ ಗುಣಮಟ್ಟ ನಿಯಂತ್ರಣ ವಲಯವು ಕೆಲಸಗಳ ವಿವಿಧ ಹಂತದಲ್ಲಿ ವೀಕ್ಷಣೆ ಮಾಡುವುದು ಹಾಗೂ ಸೂಕ್ತ ಕ್ರಮ ತೆಗೆದುಕೊಳ್ಳುವುದು.

ಉ) ಕಾವೇರಿ 3ನೇ ಹಂತವು ಪೂರ್ವನಿಯೋಜಿತ ಕಾರ್ಯಕ್ರಮಗಳ ಪ್ರಕಾರ ಡಿಸೆಂಬರ್ 1991ರ ಅಂತ್ಯಕ್ಕೆ ಮುಗಿಯಬೇಕಾಗಿತ್ತು, ಅದನ್ನು ಈಗ 1992ರ ಜೂನ್ ಅಂತ್ಯದಲ್ಲಿ ಪೂರ್ಣಗೊಳಿಸಲಾಗುವುದು.

ಊ) ಹಣದ ಕ್ರೋಢೀಕರಣದಲ್ಲಿ ಉಂಟಾದ ವಿಳಂಬದಿಂದ ಯೋಜನೆಯನ್ನು ಕಾರ್ಯಗತಗೊಳಿಸಲು ಆಗಲಿಲ್ಲ. ಯೋಜನೆಗೆ ಅಗತ್ಯವಾದ ಹಣ ಕ್ರೋಢೀಕರಣ ಮೂಲಗಳು ಮಾರ್ಚ್ 87ರಲ್ಲಿ ಇತ್ಯರ್ಥವಾದ ಮೇಲೆ ಯೋಜನೆಯ ಬೃಹತ್ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಯಿತು

ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಉಚ್ಚನ್ಯಾಯಾಲಯ ಪೀಠ ಸ್ಥಾಪಿಸುವುದು.

2753 - ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ - ಧಾರವಾಡ ಅವಳಿ ನಗರಗಳಲ್ಲಿ ಮಾನ್ಯ ಉಚ್ಚ ನ್ಯಾಯಾಲಯ ಪೀಠ ಪ್ರಾರಂಭಿಸುವುದು ಸರ್ಕಾರದ ಗಮನದಲ್ಲಿ ಬಂದಿದೆಯೇ?

ಆ) ಈ ಬಗ್ಗೆ ನ್ಯಾಯವಾದಿಗಳು ಸಾರ್ವಜನಿಕರು ಸುಮಾರು 100 ದಿವಸ ಉಪವಾಸ ಸತ್ಯಾಗ್ರಹ ಕೈಗೊಂಡು ಸದರೀ ಪೀಠ ಕೂಡಲೇ ಪ್ರಾರಂಭಿಸಲು ಒತ್ತಾಯ ಬಂದಿದ್ದೂ ಈ ಬಗ್ಗೆ ಸರ್ಕಾರದವವು ಕೈಗೊಂಡ ಕ್ರಮಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಉತ್ತರ ಕರ್ನಾಟಕದಲ್ಲಿ ಉಚ್ಚ ನ್ಯಾಯಾಲಯದ ಪೀಠ ಪ್ರಾರಂಭಿಸಬೇಕೆಂಬ ಪ್ರಸ್ತಾವನೆ ಸರ್ಕಾರದ ಗಮನದಲ್ಲಿದೆ.

ಆ) ಉಚ್ಚ ನ್ಯಾಯಾಲಯದ ಪೀಠವನ್ನು ಅದರ ಕೇಂದ್ರ ಸ್ಥಾನದಿಂದ ಹೊರಗೆ ಸ್ಥಾಪಿಸುವ ಬಗೆಗಿನ ಪ್ರಸ್ತಾವನೆಗೆ ಉಚ್ಚ ನ್ಯಾಯಾಲಯದ ಒಪ್ಪಿಗೆ ಪಡೆಯಬೇಕಾಗಿದ್ದು, ಅದರಂತೆ ಉಚ್ಚ ನ್ಯಾಯಾಲಯದ ಒಪ್ಪಿಗೆಯನ್ನು ಕೋರಲಾಗಿತ್ತು. ಆದರೆ, ಈ ಪ್ರಸ್ತಾವನೆಗೆ ಉಚ್ಚ ನ್ಯಾಯಾಲಯವು ಒಪ್ಪಿಗೆ ನೀಡಿಲ್ಲ. ಉಚ್ಚ ನ್ಯಾಯಾಲಯದ ಒಪ್ಪಿಗೆಯಿಲ್ಲದೆ ಸರ್ಕಾರ ಈ ಬಗ್ಗೆ ಯಾವ ಮುಂದಿನ ಕ್ರಮ ಕೈಗೊಳ್ಳುವಂತಿಲ್ಲ. ಸಚಿವ ಸಂಪುಟದ ನಿರ್ಣಯದಂತೆ ಮತ್ತೆ ವಿಷಯವನ್ನು ಮುಖ್ಯ ನ್ಯಾಯಾಧೀಶರೊಂದಿಗೆ ಚರ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ತುಮಕೂರು ನಗರದಲ್ಲಿ ಪಾದಚಾರಿಗಳ ರಸ್ತೆಯಲ್ಲಿರುವ ಪೆಟ್ಟಿಗೆ ಅಂಗಡಿಗಳನ್ನು ತೆರವು ಮಾಡುವುದು.

3233 - ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತುಮಕೂರು ನಗರ ವ್ಯಾಪ್ತಿಗೆ ಒಳಪಟ್ಟಿರುವ ಪಾದಚಾರಿ ರಸ್ತೆಗಳಲ್ಲಿ ಪೆಟ್ಟಿಗೆ ಅಂಗಡಿಗಳನ್ನು ಇಟ್ಟಿರುವುದರಿಂದ ಪಾದಚಾರಿಗಳವರಿಗೆ ಓಡಾಡಲು ತೊಂದರೆ ಆಗುವುದಿಲ್ಲವೇ?*

ಆ) *ಬಾಳನಕಟ್ಟೆ ಬಸ್‌ಸ್ಟ್ಯಾಂಡ್‌ನಲ್ಲಿರುವ ಅಂಗಡಿಗಳನ್ನು ತೆರವು ಮಾಡಲು ಕ್ರಮ ಕೈಗೊಳ್ಳಲಾಗುವುದೇ? ಹಾಗಿದ್ದಲ್ಲಿ ಈ ಬಗ್ಗೆ ಯಾವ ರೀತಿಯ ಕ್ರಮ ಕೈಗೊಳ್ಳಲಾಗುವುದು?*

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಹೌದು.

ಆ) ಹೌದು. ಈ ಪ್ರದೇಶದಲ್ಲಿ ಅಂಗಡಿ ಸಂಕೀರ್ಣ ಮಳಿಗೆಗಳನ್ನು ಕಟ್ಟಲು ಉದ್ದೇಶಿಸಿದ್ದು, ಕಟ್ಟಡದ ಕೆಲಸ ಪೂರ್ಣವಾದ ನಂತರ ಈ ಅಂಗಡಿಗಳನ್ನು ತೆರವು ಮಾಡಲು ಕ್ರಮ ಕೈಗೊಳ್ಳಲಾಗುವುದು.

ಚಿತ್ರದುರ್ಗ ಜಿಲ್ಲೆಯಲ್ಲಿ ಬೆಂಕಿ ಅನಾಹುತ.

3230 - ಶ್ರೀ ಎನ್.ಜಿ.ನಾಯ್ಕ(ಮೊಳಕಾಲ್ಮೂರು) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಿತ್ರದುರ್ಗ ಜಿಲ್ಲೆಯಲ್ಲಿ 1991-92 ಸಾಲಿನಲ್ಲಿ ಎಷ್ಟು ಗುಡಿಸಿಲುಗಳು ಸುಟ್ಟು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.*

ಆ) *ಹಾಗಿದ್ದಲ್ಲಿ ಎಲ್ಲೆಲ್ಲಿ ಸುಟ್ಟು ಹೋಗಿದೆ. ವಿವರಗಳನ್ನೊದಗಿಸುವುದು. ಅವರುಗಳಿಗೆ ಏನು ಕ್ರಮ ತೆಗೆದುಕೊಂಡಿರುತ್ತೀರಿ?*

ಇ) *ಈ ಕೃತ್ಯಕ್ಕೆ ಕಾರಣ ಯಾರೆಂಬುದನ್ನು ಸರ್ಕಾರದವರು ಪರಿಶೀಲನೆ ಮಾಡುವರೇ?*

ಈ) *ಹಾಗಿದ್ದರೆ ಇದಕ್ಕೆ ಕಾರಣರಾದವರ ಮೇಲೆ ಏನು ಕ್ರಮ ಕೈಗೊಳ್ಳಲಾಗುವುದು?*

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) :

ಅ) 103 ಗುಡಿಸಿಲುಗಳು.